ಸರ್ಫರಾಜ್ ಹುಸೇನ್ ತಮ್ಮ ದಂಡಿನ ಎಡಮಗ್ಗುಲಿಗಿದ್ದು ಪರಿಸ್ಥಿತಿಗಳನ್ನು ನಿಭಾಯಿಸುತ್ತಿದ್ದರು. ಅವರು ತಮ್ಮ ಸೈನಿಕರು ಬಲಮಗ್ಗುಲಿನಿಂದ ಮುಂದೆ ನುಗ್ಗುತ್ತಿರುವುದನ್ನು ಗಮನಿಸಿ ತಮ್ಮ ಸೈನಿಕರನ್ನು ಸೇರಿಕೊಳ್ಳಲೆಂದು ಸರ್ಫರಾಜ್ ಅತ್ತ ಹೊರಟರು. ಆದರೆ, ಹಿಮದಲ್ಲಿ ಅವರ ಬೂಟು ಸಿಲುಕಿಕೊಂಡಿತು. ಅವರು ಆಯತಪ್ಪಿ ಬಿದ್ದರು; ಆದರೆ, ಕೈಯಲ್ಲಿಯ ಮಶಿನ್‌ಗನ್ ಮಾತ್ರ ಬಿಡಲಿಲ್ಲ. ಎಡಮಗ್ಗುಲಿನ ತೀವ್ರ ಇಳಿಜಾರಿನಲ್ಲಿ ಉರುಳುತ್ತ ಚೀಡ ಮರದ ಬೊಡ್ಡೆಯೊಂದಕ್ಕೆ ಅಪ್ಪಳಿಸಿದ ಮೇಲೆ ಅವರ ಉರುಳುವಿಕೆ ನಿಂತಿತು. ಅವರಿಗೆ ಒಂದು ಚಿಕ್ಕ ಗಾಯವೂ ಆಗಿರಲಿಲ್ಲ. ಲಗುಬಗೆಯಿಂದ ಎದ್ದು ನಿಂತು ನೋಡಿದರು. ಸೈನಿಕರು ಬಲ ಕಣಿವೆಯವರೆಗೂ ತಲುಪಿದ್ದರು. ಈಗ ಅವರಿಂದ ಇವರು ಬಹುದೂರದಲ್ಲಿದ್ದರು. ಸರ್ಫರಾಜ್ ಮರಗಳ ಆಸರೆ ಪಡೆಯುತ್ತ ಕದ್ದುಮುಚ್ಚಿ ಅತ್ತ ಹೋಗಲಾರಂಭಿಸಿದರು. ಅಷ್ಟರಲ್ಲಿ, ಮರವೊಂದರ ಹಿಂದಿನಿಂದ ಹೊರಟ ಬಂದೂಕು ನೇರವಾಗಿ ಅವರ ಕಿವಿಯ ಮೇಲ್ಬದಿಯಲ್ಲಿ ತಣ್ಣನೆಯ ಲೋಹಸ್ಪರ್ಶ ನೀಡಿತು. ಸರ್ಫರಾಜ್ ಅಡಿಯಿಂದ ಮುಡಿಯವರೆಗೆ ನಡುಗಿದರು, 'ಯಾ... ಅಲ್ಲಾಹ! ನಾನು ಇದೆಲ್ಲಿ ಬಂದಿದ್ದೇನೆ?' ಎಂದುಕೊಳ್ಳುತ್ತ ಶತ್ರುವಿನತ್ತ ತಿರುಗಿ ನೋಡಲು ಪ್ರಯತ್ನಿಸಿದರು.

'ಎಚ್ಚರಿಕೆ ಆಫೀಸರ್, ಒಂದಿಷ್ಟೂ ಕದಲಬೇಡ, ಇಲ್ಲವಾದರೆ ಗುಂಡು ಹಾಕಿಬಿಡುತ್ತೇನೆ.'

ಇದ್ಯಾರ ಧ್ವನಿ? ಸರ್ಫರಾಜ್ ಆಶ್ಚರ್ಯಚಕಿತನಾದ ಹಾಗೂ ಸಾವಧಾನಗೊಂಡ. ನಿಂತಂತೆಯೇ ನಿಂತು, 'ಯಾರು? ಆಫೀಸರ್, ನೀವ್ಯಾರು?' ಎಂದು ಕೇಳಿದ. ಧ್ವನಿ ಸ್ವಲ್ಪ ಮತ್ತಗಾಗಿತ್ತು.

'ಈ ಪ್ರಶ್ನೆ ನಾನು ಕೇಳಬೇಕು, ನೀನ್ಯಾರು? ನಿನ್ನ ಹೆಸರೇನು?'

'ಕರ್ನಲ್ ಸರ್ಫರಾಜ್ ಹುಸೇನ್'

'ಸರ್ಫರಾಜ್?...' ಆ ಧ್ವನಿಯಲ್ಲಿ ಒಂದಿಷ್ಟು ಕಂಪನವಿತ್ತು 'ಕರ್ನಲ್ ಸರ್ಫರಾಜ್ ಹುಸೇನ್ ಜಾಫರ್!!...' ಎಂದವನೇ ಆ ಬಂದೂಕುಧಾರಿ ಮರುಕ್ಷಣವೇ ಅವನ ಎದುರು ಬಂದು ನಿಂತಿದ್ದ.

ಒಂದಿಷ್ಟು ಸಮಯಾವಕಾಶ ಸಿಗುತ್ತಲೇ ಸರ್ಫರಾಜ್ ತನ್ನ ಮಶಿನ್‌ಗನ್ನು ಅವನ ಎದೆಗೆ ಹಚ್ಚಿದ. ಅವರ ತಲೆಯ ಮೇಲೆ ಯಾವುದೇ ಮರದ ನೆರಳಿರಲಿಲ್ಲ. ಇದ್ದದ್ದು ಮುಕ್ತವಾದ ಮುಗಿಲು! ಇಬ್ಬರೂ ಶತ್ರುಗಳು ಪರಸ್ಪರರ ಎದೆಗೆ ಆಯುಧಗಳನ್ನು ಆನಿಸಿ ಎದುರು ಬದುರು ನಿಂತಿದ್ದರು. ಅವರ ಮೈಮೇಲೆ ಮಿಂಚುಹುಳಗಳ ಬೆಳಕು ಸುರಿಯುತ್ತಿತ್ತು. ಅಲ್ಲದೇ ಈ ಅಭೂರ್ತಪೂರ್ವ ಗಳಿಗೆಯನ್ನು ಇನ್ನಷ್ಟು ಸುಂದರವಾಗಿಸಲು ನಾಲ್ಕೂ ಕಡೆಗಳಲ್ಲಿ ಶುಭ್ರವಾದ ಹಿಮದ ಕಾಲೀನು ಹರಡಿತ್ತು.

ಇಬ್ಬರೂ ಪರಸ್ಪರರನ್ನು ನೋಡಿದರು. ಒಂದೆರಡು ಕ್ಷಣ ನೋಡುತ್ತಲೇ ಇದ್ದರು. ಮುಂದಿನ ಗಳಿಗೆಯಲ್ಲಿ ಇಬ್ಬರ ಬಾಯಿಯಿಂದ ಒಮ್ಮೆಲೇ ಶಬ್ದಗಳು ಹೊರಟವು... 'ಸರ್ಫರಾಜ್? ನೀನಾ?'

ಒಬ್ಬ ಸಿಖ್ ಎದುರಿಗೆ ನಿಂತಿದ್ದ, ಅವನ ಕೆಂಬಣ್ಣ ನಸುಕಿನ ನಸುಗತ್ತಲಲ್ಲಿಯೂ ಸ್ಪಷ್ಟವಾಗಿ ಕಾಣುತ್ತಿತ್ತು.

'ವೀರೇಂದ್ರ, ನೀನಾ?...'

ಒಂದಷ್ಟು ಹೊತ್ತಿನವರೆಗೆ ಮೌನದ ಹಕ್ಕಿಯೊಂದು ಅಲ್ಲಿ ಸುತ್ತಾಡುತ್ತಿತ್ತು.

'ವೀರೂ ಇಂದೆಂಥ ಭೇಟಿಯೋ ನಮ್ಮದು? ಗೆಳೆಯಾ, ಇಂದು ಇಪ್ಪತ್ತು ವರ್ಷಗಳ ನಂತರ ನಾವು ಸಿಕ್ಕಿದ್ದೇವೆ, ಆದರೆ ಹೀಗೆ?'

'ಗೆಳೆಯರಲ್ಲ, ಇಲ್ಲ, ಗೆಳೆಯಾ!... ಈಗಂತೂ ನಾವು ಶತ್ರುಗಳು.'

'ಹೌದು, ವೈರಿಗಳು. ಇರಲಿ, ನಿನ್ನನ್ನು ನಾನು ನೆನಪಿಸಿದ್ದಕ್ಕೆ ಲೆಕ್ಕವೇ ಇಲ್ಲ.'

'ನಾನೂ ನಿನ್ನ ಬಗ್ಗೆಯೇ ಚಿಂತಿಸುತ್ತಿರುತ್ತಿದ್ದೆ. ನೀನು ಒಮ್ಮೆಯಾದರೂ ಫೋನ್